

◆ **ಪುರಾಣ ಪಾತ್ರಗಳ ಮರುಕಥನದ ಕುರಿತು ನಿಮಗೆ ಯಾಕಿಷ್ಟು ಆಸಕ್ತಿ?**

ನಾವು ಭಾರತೀಯರು ನಮ್ಮ ದೇವಾನುದೇವತೆಗಳನ್ನು ಪ್ರೀತಿಸುತ್ತೇವೆ. ವಾಲ್ಮೀಕಿ ಬರೆದದ್ದು ಮೂಲ ರಾಮಾಯಣ. ಆದರೆ, ಭಾರತದಲ್ಲಿ ಬೇರೆ ಬೇರೆ ರಾಮಾಯಣಗಳಿವೆ. ಎಲ್ಲದರಲ್ಲೂ ಒಂದೇ ಕಥೆ ಇಲ್ಲ. 'ಅದ್ಭುತ ರಾಮಾಯಣ'ದಲ್ಲಿ ಸೀತೆ ರಾವಣನನ್ನು ಕೊಲ್ಲುತ್ತಾಳೆ. ಜೈನರ ರಾಮಾಯಣದಲ್ಲಿ ರಾಮ ಅಹಿಂಸಾವಾದಿ. ಕುವೆಂಪು ಅವರ 'ರಾಮಾಯಣ ದರ್ಶನಂ' ಸಹ ಮೂಲ ರಾಮಾಯಣಕ್ಕಿಂತ ಭಿನ್ನವಾಗಿಯೇ ಇದೆ. ನಮ್ಮ ಪುರಾಣದ ಕಥೆಗಳ ಕುರಿತ ಹೊಸ ಹೊಸ ವ್ಯಾಖ್ಯಾನಗಳನ್ನು ಕೇಳಲು ಇಷ್ಟಪಡುತ್ತೇವೆ. ಹೀಗೆ, ಪುರಾಣಗಳನ್ನು, ಕಾಲ–ದೇಶಕ್ಕೆ ಅನುಗುಣವಾಗಿ ಹೊಸದಾಗಿ ಬರೆಯುವುದರಿಂದ, ನಮ್ಮ ಸಂಸ್ಕೃತಿ–ಪರಂಪರೆ ಉಳಿಯುತ್ತವೆ.